ಮನೆ ಮಾಡಿಕೊಂಡಿರುವ, ನಿಯಂತ್ರಿಸಲು ಅಸಾಧ್ಯವಾದ ಮಾನಸಿಕ ಕ್ಲೇಶಗಳ ಕಾರಣಗಳನ್ನು ಪತ್ತೆಹಚ್ಚಿದಾಗ, ಅವುಗಳು ಕ್ಷೀಣಗೊಳ್ಳುತ್ತವೆ. ಧರ್ಮಮಾರ್ಗವನ್ನು ಅರಿತುಕೊಂಡು ಮನಸ್ಸನ್ನು ಅದರಲ್ಲಿ ಚೆನ್ನಾಗಿ ನೆಲೆ ನಿಲ್ಲಿಸಿದವನು ಸಹನೆ, ಆತ್ಮ-ಸಂಯಮ ಅಥವಾ ವಿವೇಕಗಳಿಂದ ಆ ಮಾನಸಿಕ ಕ್ಲೇಶಗಳ ಹೊಡೆತಗಳನ್ನು ತಡೆದುಕೊಳ್ಳುವ ಯೋಗ್ಯತೆಯನ್ನು ಹೊಂದುತ್ತಾನೆ. ಕ್ರಮೇಣ ಆತ ಅವುಗಳಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಲು ಪ್ರಯತ್ನಿಸಬೇಕು.

ಧರ್ಮದ ಅಜ್ಞಾನದಿಂದ ಕೆಳಗೆ ಹೇಳಿರುವ ಸನ್ನಿವೇಶಗಳು ಒಂದರ ನಂತರ ಒಂದರಂತೆ ಉದ್ಭವಿಸುತ್ತವೆ: ಹೆಚ್ಚುತ್ತಲೇ ಹೋಗುವ ಶತ್ರುಗಳ ಸಂಖ್ಯೆ, ಸ್ವಾರ್ಥೋದ್ದೇಶಗಳ ಗಳಿಕೆಯಲ್ಲಿ ಸ್ಪರ್ಧೆ, ಈ ಸ್ಪರ್ಧೆಯಲ್ಲಿ ಪ್ರತಿಸ್ಪರ್ಧಿಯನ್ನು ಸೋಲಿಸುವ ಪ್ರಯತ್ನ ಹಾಗೂ ಕೊನೆಯಲ್ಲಿ ವಿಜೇತನಾಗಿ ಹೊಮ್ಮುವುದು. ಜಗತ್ತನ್ನು ಈ ದೃಷ್ಟಿಯಲ್ಲಿ ನೋಡುವವರು ತಮ್ಮ ದೇಶವನ್ನು ಶಕ್ತಿಶಾಲಿಯನ್ನಾಗಿ ಮಾಡುವ ಪ್ರಯತ್ನದಲ್ಲಿ ಸೈನ್ಯವನ್ನು ಮಾರಕಾಸ್ತ್ರಗಳಿಂದ ಸಜ್ಜುಗೊಳಿಸುತ್ತಾರೆ; ಕಲಹಗಳಿಗೆ ಯಾವುದೇ ಶಾಂತರೀತಿಯ ಪರಿಹಾರ ನೀಡಲು ಅಸಮರ್ಥರಾಗಿ, ಭೀಕರ ಯುದ್ಧಗಳನ್ನು ಹುಟ್ಟುಹಾಕುತ್ತಾರೆ. ಜನರ ಮನಸ್ಸಿನಲ್ಲಿ ಮೂಡುವ ಇಂತಹ ಲಂಗುಲಗಾಮಿಲ್ಲದ ಕಾಮ, ದ್ವೇಷ, ಭ್ರಮೆ, ಕ್ರೋಧ, ಲೋಭ, ಕಾಪಟ್ಯ, ಕ್ರೌರ್ಯವೇ ಮೊದಲಾದ ಕ್ಲೇಶಗಳ ಶಕ್ತಿಶಾಲಿ ಪ್ರವಾಹವು, ಮೇರೆ ತಪ್ಪಿ ಹರಿಯುವ ದೊಡ್ಡ ದೊಡ್ಡ ನದಿಯಂತೆ, ತನ್ನೆಲ್ಲ ಬಲವನ್ನೂ ಒಗ್ಗೂಡಿಸಿಕೊಂಡು ನುಗ್ಗಿ ಬರುತ್ತದೆ. ಇದರ ಫಲಿತಾಂಶವಾಗಿ, ನಿರಾಶ್ರಯರಾದ ಜೀವಿಗಳು ದುಃಖದ ಆವೇಗದ ಮಧ್ಯೆ ಸಿಕ್ಕಿ, ತಾವು ಇಷ್ಟಪಟ್ಟಿದ್ದಕ್ಕೆ ವಿರುದ್ಧವಾಗಿ ಜೀವಿಸಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ ಧರ್ಮದ ಅರಿವು ಇದ್ದು ಯಾರು ಅದರ ಅನುಸಾರವಾಗಿ ನಡೆಯುವರೋ ಅವರ ವಿಷಯದಲ್ಲಿ, ಮೇಲಿನ ವಿವಿಧ ಬಗೆಯ ದುಃಖಗಳ ಭರಾಟೆ ಅಂತ್ಯಗೊಂಡು, ಅವರು ಶಾಂತಿ-ಸಮಾಧಾನಗಳನ್ನು ಅನುಭವಿಸುತ್ತಾರೆ.

ಮನುಷ್ಯಜೀವನದಲ್ಲಿ ಮನಸ್ಸೇ ಪ್ರಧಾನ. ಮನಸ್ಸಿನ ವಿವಿಧ ಕ್ರಿಯೆಗಳು ಅವನ ಮೇಲೆ ತಮ್ಮ ಹಿಡಿತವನ್ನು ಸಾಧಿಸುತ್ತವೆ. ಅಹಂಭಾವ, ಅಸೂಯೆ, ಕಾಮ, ದ್ವೇಷ ಹಾಗೂ ಭ್ರಮೆ- ಇವುಗಳೆಲ್ಲ ಮನಸ್ಸಿನ ಕ್ರಿಯೆಗಳು. ಅವು ತನಗೂ, ಪರರಿಗೂ ಹಾನಿಯನ್ನುಂಟುಮಾಡುವುದರಿಂದ ಅವುಗಳನ್ನು **ಅಕುಶಲ ಧರ್ಮ**ಗಳೆಂದು ಕರೆಯುತ್ತಾರೆ. ಹಾಗೆಯೆ, ಮೈತ್ರಿ, ದಯಾ, ಸೇವಾ, ಭಕ್ತಿ, ತ್ಯಾಗ ಮತ್ತು ವಿಶ್ವಾಸ- ಇವುಗಳೂ ಮಾನಸಿಕ ವ್ಯಾಪಾರಗಳೇ. ಆದರೆ, ಅವು ಉಪಕಾರಕವಾದುದರಿಂದ ಅವುಗಳನ್ನು **ಕುಶಲ ಧರ್ಮ**ಗಳೆಂದು ಕರೆಯುತ್ತಾರೆ. ಈ ಕುಶಲ ಧರ್ಮಗಳ ಶಕ್ತಿಯಿಂದ ಮನಸ್ಸಿನಲ್ಲಿರುವ ದೋಷ, ಕ್ಲೇಶಗಳು ನಾಶವಾಗುತ್ತವೆ. ಇವುಗಳನ್ನು ಮಾನವನು ಆಸಕ್ತಿವಹಿಸಿ ಬೆಳೆಸಿಕೊಂಡಲ್ಲಿ ದೋಷಪೂರಿತನಾಗುವುದರಿಂದ ಪಾರಾಗುತ್ತಾನೆ. ಹ್ರೀಯನ್ನು (ಕೆಟ್ಟ ಕೆಲಸ ಮಾಡುವುದಕ್ಕೆ ನಾಚಿಕೆ) ಬೆಳಸಿಕೊಂಡಲ್ಲಿ ಮನಸ್ಸಿನ ಕ್ಲೇಶಗಳಿಂದ ಮುಕ್ತಿಯನ್ನು ಹೊಂದಬಹುದು. ಇದರಿಂದ **ಮೈತ್ರಿ, ಕರುಣೆ, ಮುದಿತ**ಗಳೇ ಮೊದಲಾದ ಗುಣಗಳಲ್ಲಿ ಶ್ರದ್ಧೆಯುಂಟಾಗುತ್ತದೆ. ಪರರ ನಿಂದೆಯ ಭಯವೂ, ಅನ್ಯಾಯ ಅನೈತಿಕ ಕೆಲಸಗಳನ್ನು ಮಾಡುವುದನ್ನು ತಡೆಯುತ್ತದೆ. ಮನುಷ್ಯನನ್ನು ಕೆಟ್ಟ ಕೆಲಸ ಮಾಡದಂತೆ ತಡೆಯುವಲ್ಲಿ ಮೇಲಿನ ಗುಣಗಳು ಕಾವಲುಗಾರರಂತೆ ಕೆಲಸ ಮಾಡುತ್ತವೆ. ಇವುಗಳ ಸಾಮರ್ಥ್ಯದಿಂದ ಹಲವು ಬಗೆಯ ಪ್ರಮಾದಗಳಿಂದ ರಕ್ಷಣೆ ಪಡೆದು, ಧರ್ಮಾವಲಂಬಿಯಾದ ಮಾನವನು ಸಂತೃಪ್ತಿಯ ಜೀವನ ನಡೆಸುತ್ತಾನೆ. ಸಂತೃಪ್ತಿಯ ಜೀವನದಲ್ಲಿಯೇ ಶಾಂತಿಯಿದೆ, ಸುಖವಿದೆ; ಅಷ್ಟೇ ಅಲ್ಲದೆ, ಜೀವನವು ಅಸಹ್ಯವೆನಿಸುವಷ್ಟು ಕಷ್ಟವಾಗುವುದಿಲ್ಲ. ಈ ಕಾರಣಗಳಿಂದ, ಧರ್ಮದ ಮೂಲತತ್ತ್ವವನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಅದನ್ನು ಜೀವನದಲ್ಲಿ ಸರ್ವಥಾ ಆಚರಣೆಗೆ ತರಬೇಕು. ಇದೇ ಒಬ್ಬನ ವೈಯಕ್ತಿಕ ಜೀವಿತದ ಉದ್ಧಾರಕ್ಕಾಗಿ ಮತ್ತು ಸಮಾಜದ ಶ್ರೇಯಸ್ಸಿಗಾಗಿ ಇರುವ ಏಕೈಕ ಮಾರ್ಗ.

(ಸಂಗ್ರಹ)

## ವಿನೋದದಿಂದ ವೇದಾಂತ

**ಮನುಷ್ಯನ ಆಸೆಗಳಿಗೆ ಕೊನೆಯೇ ಇಲ್ಲ. ಆಸೆಗಳು ಬರುವುದು ಅಜ್ಞಾನದಿಂದ. ಆತ್ಮಸ್ವರೂಪಿಗಳಾದ ನಾವು ಪರಿಪೂರ್ಣರು ಎಂಬ ಅರಿವು ಇಲ್ಲದಾಗ ಆಸೆಗಳು ಹುಟ್ಟಿಕೊಳ್ಳುತ್ತವೆ.** ಎರಡು ಕತ್ತೆಗಳಿದ್ದವು. ಒಂದು ಕಾಡಿನ ಕತ್ತೆ. ಇನ್ನೊಂದು ಊರಿನ ಕತ್ತೆ. ಅವರೆಡೂ ಒಮ್ಮೆ ಭೇಟಿಯಾದವು. "ಏನಣ್ಣಾ, ಹೇಗಿದ್ದೀಯೆ?" ಎಂದಿತು ಕಾಡಿನ ಕತ್ತೆ. "ಅಯ್ಯೋ, ಏನು ಹೇಳೋದು. ಒಂದು ನಿಮಿಷ ಕೂಡ ನನ್ನ ಒಡೆಯ ಬಿಡೋದಿಲ್ಲ, ಸಿಕ್ಕಾಪಟ್ಟೆ ದುಡಿಸುತ್ತಾನೆ" ಎಂದಿತು ಊರಿನ ಕತ್ತೆ. "ಹಾಗಾದರೆ ಕಾಡಿಗೆ ಬಂದುಬಿಡು." ಎಂದು ಆಹ್ವಾನಿಸಿತು, ಕಾಡಿನ ಕತ್ತೆ. "ಇಲ್ಲಪ್ಪಾ, ನನ್ನ ಒಡೆಯನಿಗೆ ನನ್ನ ಮೇಲೆ ಎಷ್ಟು ಪ್ರೀತಿ ಅಂದರೆ, ಅವನ ಮಗಳಿಗೆ, 'ಕತ್ತೇ, ಕತ್ತೇ' ಅಂತ ಒಮ್ಮೊಮ್ಮೆ ಕರೀತಾನೆ. ಗೊತ್ತಾ?" ಎಂದಿತು ಊರಿನ ಕತ್ತೆ. "ಅದಕ್ಕೇನಂತೆ, ಅದರಿಂದ ನಿನಗೇನು ಬಂತು?" ಎಂದಿತು ಕಾಡಿನ ಕತ್ತೆ. "ಅಷ್ಟು ಮಾತ್ರ ಅಲ್ಲಪ್ಪಾ, ನನ್ನ ಒಡೆಯ ಅವನ ಮಗಳಿಗೆ 'ನಿನ್ನನ್ನ, ನಿನ್ನನ್ನ....ಈ ಕತ್ತೆಗೆ ಕೊಟ್ಟು ಮದುವೆ ಮಾಡಿಬಿಡುತ್ತೇನೆ ನೋಡು' ಅಂತಲೂ ಹೇಳ್ತಾ ಇರ್ತಾನೆ. **ಅದಕ್ಕೇ ಕಾಯ್ತಾ ಇದ್ದೀನಿ"** ಎಂದಿತು ಊರಿನ ಕತ್ತೆ, ಜೊಲ್ಲು ಸುರಿಸುತ್ತ.

**ಈ ಜೀವನ ನಿತ್ಯವಾದುದು ಎಂದು ಭಾವಿಸಿ ನಾವು ಭ್ರಮೆಗೆ ಒಳಗಾಗುತ್ತೇವೆ; ಭವಿಷ್ಯದಲ್ಲಿ ನಮ್ಮ ಗತಿ ಏನಾಗುತ್ತದೆ ಎನ್ನುವುದನ್ನು ಮರೆತೇ ಬಿಡುತ್ತೇವೆ. ಆದರೆ ಇತರರಿಗೆ ಮಾತ್ರ ನಮ್ಮ ವೇದಾಂತದ ಉಪದೇಶ ಮಾಡುತ್ತೇವೆ. ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿತೋರಿದಂತೆ ಇದು ಎಂದು ಕಠೋಪನಿಷತ್ತು ಹೇಳುತ್ತದೆ.** ಶಾಲೆಯ ಮಕ್ಕಳ ಗ್ರೂಪ್ ಫೋಟೋ ತೆಗೆಯಲಾಯಿತು. ಎರಡು ಮೂರು ದಿನಗಳ ನಂತರ ಶಿಕ್ಷಕಿ ಮಕ್ಕಳಿಗೆ ಆ ಫೋಟೋ ಕೊಂಡುಕೊಳ್ಳುವಂತೆ ಪುಸಲಾಯಿಸುತ್ತಿದ್ದರು. ಮಕ್ಕಳಿಗೆ ಫೋಟೋ ತೋರಿಸುತ್ತ ಹೇಳುತ್ತಿದ್ದರು: "ನೋಡಿ, ಹಲವು ವರ್ಷಗಳಾದ ನಂತರ, ನೀವು ದೊಡ್ಡವರಾದ ಮೇಲೆ, ಈ ಫೋಟೋದಲ್ಲಿರುವ ನಿಮ್ಮ ಸಹಪಾಠಿಗಳನ್ನು ತೋರಿಸುತ್ತ ಹೀಗೆ ಹೇಳಬಹುದು: 'ಇದೋ ರಮೇಶ, ಈಗ ಡಾಕ್ಟರಾಗಿದ್ದಾನೆ', 'ಇದೋ ಗಿರಿಜಾ, ಇವಳು ಈಗ ಲಾಯರ್.' " ಹಿಂದಿನ ಬೆಂಚಿನಿಂದ ಒಂದು ಸಣ್ಣ ದನಿ ಕೇಳಿಸಿತು, **"ಇದೋ ನೋಡು ನಮ್ಮ ಮೇಡಂ, ಅವರೀಗ ಸತ್ತುಹೋಗಿದ್ದಾರೆ!"** ▪